ಪಿ ಡಬ್ಲೂ.01

**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ ವಾದಿಯ ಪರ ಶ್ರೀ ಎಲ್ ಎಮ್ .ವಕೀಲರಿಂದಃ</u>**

ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿದ್ದೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರುತಿಸಿಕೊಂಡಿರುತ್ತೇನೆಃ-

ನಿಪಿ-1.Memorandum of agreement.
ನಿಪಿ-2. Letter of Revivals
ನಿಪಿ-3 to 6. Letter of revivals obtained from legal heirs.
ನಿಪಿ-7. Statement of Account.

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ ಎಸ್ ವಕೀಲರಿಂದಃ</u>**

1. 2007 ರಿಂದ ಮ್ಯಾನೇಜರ್ ಯಾರಿದ್ದರು ಎಂದರೆ ಹೆಸರು ನೆನಪಿಲ್ಲ. ಲೋನ್ ಯಾರು ಹೆಸರಿಗೆ ಆಗಿದೆ ಎಂದರೆ ದ್ಯಾಮಣ್ಣ ಎನ್ನುವವರ ಹೆಸರಿನಲ್ಲಿ. ಇದು ಕ್ರಾಪ್ ಲೋನ್ ಎಂದರೆ ಹೌದು. ಕ್ರಾಪ್ ಲೋನ್ ಗೆ 5 ವರ್ಷ ಅವದಿಗೆ ಇರುತ್ತದೆ ಆದರೆ ಅದು ಪ್ರತಿ ವರ್ಷ ನವೀಕರಣ ಆಗಬೇಕಾಗುತ್ತದೆ. ರಿನಿವಲ್ ಎಂದರೆ ಹೇಗೆ ಎಂದರೆ 11 ತಿಂಗಳ ನಂತರ ಪೂರ್ತಿ ಹಣ ಮತ್ತು ಬಡ್ಡಿ ಕಟ್ಟಬೇಕಾಗುತ್ತೆ ಮತ್ತೆ ಪುನಃ ಹೊಸದಾಗಿ ಲೋನ್ ಪಡೆಯಬೇಕು. ರಿನಿವಲ್ ಎಷ್ಟು ಬಾರಿ ಆಗಿದೆ ಎಂದರೆ 2008 ರಿಂದ 2011 ತನಕ ಆಗಿದೆ. ಆ ನಂತರ ಆಗಿಲ್ಲ ಎಂದರೆ ಹೌದು. ಎನ್ ಪಿಎ ಯಾವಾಗ ಆಗಿದೆ ಎಂದರೆ ರಿನಿವಲ್ ಆಗಿದ್ದ ಡೇಟ್ ನಿಂದ ಎರಡು ಕ್ರಾಪ್ ಸೀಸನ್ ತನಕ ಆಗಿದೆ ನಂತರ ಸಾಲ ಸುಸ್ತಿ ಆಗಿದೆ. ಪಾಸ್ ಶೀಟ್ ನಲ್ಲಿ ಈ ಬಗ್ಗೆ ಮಾಡಿಲ್ಲ

ಆದರೆ ಸಿಸ್ಟಮ್ ನಲ್ಲಿ ಇದೆ. ದಿಃ20.03.2013 ರಂದು ದ್ಯಾಮಣ್ಣ ರವರು ತೀರಿಕೊಂಡಿದ್ದಾರೆ. ಅವರಿಗೆ ಎಷ್ಟು ಜನ ಮಕ್ಕಳು ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ಸಿದ್ದೇಶ ಎನ್ನುವವರು ಒಬ್ಬರು ಅವರ ವಾರಸುದಾರರಾಗಿರುತ್ತಾರೆ. ದ್ಯಾಮಣ್ಣರವರಿಗೆ ಹೆಣ್ಣುಮಕ್ಕಳು ಇದ್ದಾರಾ ಎಂದರೆ ಗೊತ್ತಿಲ್ಲ. 2013 ರಲ್ಲಿ ದ್ಯಾಮಣ್ಣ ತೀರಿಕೊಂಡ ನಂತರ ಹಣವನ್ನು ವಸೂಲಿ ಮಾಡಿಲ್ಲ ಎಂದರೆ ಹೌದು ಕಾರಣ ಸಿದ್ದೇಶ್ ರವರು ವಾರಸುದಾರರಾಗಿ ನಿಪಿ.3 ರಿಂದ 6 ಬರೆದುಕೊಟ್ಟಿರುತ್ತಾರೆ ಆದ್ದರಿಂದ ಮಾಡಿಲ್ಲ. ನಮ್ಮ ಬ್ಯಾಂಕ್ ಗೂ ಸಿದ್ದೇಶರವರಿಗೆ ಯಾವುದೇ ಲೋನ್ ಟ್ರಾನ್ಸಾಕ್ಷನ್ ಇಲ್ಲ ಎಂದರೆ ಹೌದು. ಸಿದ್ದೇಶ್ ರವರು ಯಾವುದೇ ಎ ಓ ಡಿ ಶೂನ್ಯ ಎಂದರೆ ಸರಿಯಲ್ಲ. ಕಾರಣ ಅವರು ದ್ಯಾಮಣ್ಣ ರವರ ವಾರಸುದಾರರಾಗಿರುತ್ತಾರೆ ಅವರು ತೀರಿಕೊಂಡ ನಂತರ ಬರೆದುಕೊಟ್ಟ ದಾಖಲೆ ಕಾನೂರು ಪ್ರಕಾರ ಸರಿಯಿರುತ್ತದೆ ಎಂದು ಹೇಳುತ್ತಾರೆ. ರೈತರು ಬೆಳೆದ ಬೆಳೆ ಮೇಲೆ ಕ್ರಾಪ್ ಲೀನ್ ಇದೆ ಎಂದರೆ ಹೌದು . ಲೀನ್ ಹಕ್ಕು ಚಲಾಯಿಸಿದ್ದೀರಾ ಎಂದರೆ ಇಲ್ಲ. ಪ್ರತಿವಾದಿಗೆ ಕಾನೂನು ಪ್ರಕಾರ ವೈಯಕ್ತಿಕ ವಾಗಿ ಹೊಣೆಗಾರಿಕೆ ಇಲ್ಲ ಎಂದರೆ ಸರಿಯಲ್ಲ ಕಾರಣ ಅವರು ಕೂಡ ದ್ಯಾಮಣ್ಣರವರ ವಾರಸುದಾರರಾಗಿರುತ್ತಾರೆ. ದ್ಯಾಮಣ್ಣರವರ ಆಸ್ತಿ ಮೇಲೆ ಮಾತ್ರ ನನಗೆ ಹಕ್ಕು ಇದೆ ಪ್ರತಿವಾದಿ ಮೇಲೆ ಅಥವಾ ದ್ಯಾಮಣ್ಣನ ವಾರಸುದಾರರ ಮೇಲೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ.3 ರಿಂದ 6 ಪ್ರತಿವಾದಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ದಾವೆ ಅವದಿ ಮೀರಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು 2013 ರಲ್ಲಿ ದ್ಯಾಮಣ್ಣ ತೀರಿಕೊಂಡ ತಕ್ಷಣ ಹಾಕಬೇಕಿತ್ತು ಆದರೆ ಹಾಕದೇ ಈಗ ಕಾನೂನು ಪ್ರಕಾರ ಕಾಲಪರಿಮಿತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**

**ನ್ಯಾಯಾಧೀಶರು, ಚಿತ್ರದುರ್ಗ**